## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.

ಸಿಸಿ ನಂ.151/2023

ಫಿರ್ಯಾದುದಾರರು : ಸರಕಾರ ಅಬಕಾರಿ ನಿರೀಕ್ಷಕರು
ಹಾನಗಲ್ ರವರಿಂದ

ವಿರುದ್ಧ

ಆರೋಪಿ : ವಿಶಾಲ ಅಶೋಕ ಕಲಾಲ

ಶ್ರೀಮತಿ ಅನಿತ, ಬಿ.ಎ.(ಲಾ), ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹಾನಗಲ್ ಆದ ನಾನು ಈ ಕೆಳಗೆ ಕಾಣಿಸಿರುವ:

ವಿಶಾಲ ಅಶೋಕ ಕಲಾಲ ,
26 ವರ್ಷ, ಹೋಟೆಲ್ ಮಾಲೀಕ,
ವಾಸಃ ಸ್ವಾಮಿ ವಿವೇಕಾನಂದ ನಗರ, ಹಾನಗಲ್ಲ,
ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ

### ದೋಷಾರೋಪಣೆ

ಆದ ನಿಮ್ಮ ವಿರುದ್ಧ ಈ ಕೆಳಗಿನಂತೆ ಹೊರಿಸಿರುವ ದೋಷಾರೋಪಣೆ ಏನೆಂದರೆಃ

ದಿನಾಂಕ 20.09.2022 ರಂದು ಅಬಕಾರಿ ಉಪ ಆಯುಕ್ತರು, ಹಾವೇರಿ ಜಿಲ್ಲೆ ಹಾಗು ಉಪಅಧೀಕ್ಷಕರು ಉಪವಿಭಾಗ ಹಾವೇರಿರವರ ಮಾರ್ಗದರ್ಶನದಂತೆ ಹಾನಗಲ್ ಅಬಕಾರಿ ವಲಯದ ಅಬಕಾರಿ ನಿರೀಕ್ಷಕರಾದ ಚಾಸಾ-1 ಸವಿತಾ ಆರ್.ಟಿ. ರವರು ತಮ್ಮ ಸಿಬ್ಬಂದಿಗಳೊಂದಿಗೆ ಮಧ್ಯಾಹ್ನ ಸುಮಾರು 12.30 ಗಂಟೆಯ ಸಮಯದಲ್ಲಿ ಹಾನಗಲ್ ತಾಲ್ಲೂಕಿನ ಕರಗುದರಿ ಗ್ರಾಮದ ತಡಸಕ್ಕೆ ಹೋಗುವ ರಾಜ್ಯ ಹೆದ್ದಾರಿ 1 ರ ಪಕ್ಕದಲ್ಲಿರುವ ಆರೋಪಿಯಾದ ನಿಮ್ಮ ನ್ಯೂ ರೇಣುಕಾ ಡಾಬಾದ ಮೇಲೆ ಅಬಕಾರಿ ದಾಳಿ ನಡೆಸಿದಾಗ 90 ಎಂ ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿಯ ಒಟ್ಟು 22 ಟೆಟ್ರಾ ಪ್ಯಾಕ್‌ಗಳು, 90 ಎಂ.ಎಲ್ ನ ಓಲ್ಡ್ ಟಾವರಿನ್ ವಿಸ್ಕಿಯ ಒಟ್ಟು 12 ಟೆಟ್ರಾಪ್ಯಾಕ್‌ಗಳು ಒಟ್ಟು 3.06 ಲೀಟರ್ ಮದ್ಯ ಹಾಗೂ 650 ಎಂ ಎಲ್ ನ ಟೋಬರ್ಗ ಬಿಯರ್ ನ 14 ಬಾಟಲಿಗಳು ಮತ್ತು 330 ಎಂ ಎಲ್ ನ ನಾಕೌಟ್ ಹೈ ಪಂಚ್ ಬಿಯರ್ ನ 06 ಬಾಟಲಿಗಳು ಒಟ್ಟು 11.08 ಲೀಟರ್ ಬಿಯರ್ ಇದ್ದು ನೀವು ಯಾವುದೇ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಮಾರಾಟ ಮಾಡುವ ಉದ್ದೇಶದಿಂದ ಸಾಗಾಣಿಕೆ ಮಾಡಿರುತ್ತೀರಿ ಎಂದು

ತನಿಖೆಯಿಂದ ದೃಢಪಟ್ಟಿದ್ದು ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 32(1)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗು ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ವಿವರಿಸಿದ ಮದ್ಯವನ್ನು ಯಾವುದೇ ಪಾಸ್ ವ ಪರ್ಮಿಟ್ ಇಲ್ಲದೇ ಅನಧಿಕೃತವಾಗಿ ನಿಮ್ಮ ಸ್ವಾಧೀನದಲ್ಲಿ ಹೊಂದಿರುತ್ತೀರಿ ಎಂದು ತನಿಖೆಯಿಂದ ದೃಢಪಟ್ಟಿದ್ದು ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆಯ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಾಣಿಸಿದ ಆರೋಪಣೆಯ ಬಗ್ಗೆ ನಿಮ್ಮನ್ನು ಈ ನ್ಯಾಯಾಲಯದ ಮುಂದೆ ವಿಚಾರಣೆಗೆ ಗುರಿಪಡಿಸುತ್ತೇನೆ ಎಂದು ಈ ಮೂಲಕ ಆಜ್ಞೆ ಮಾಡುತ್ತಿದ್ದೇನೆ.

- ಸಹಿ -
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಹಾನಗಲ್.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಹಾನಗಲ್.

ಸಿಸಿ ನಂ.151/2023

ಆರೋಪಿ

| | | |
|---|---|---|
| ಆಪಾದಿತನ ಹೆಸರು | : | ವಿಶಾಲ ಅಶೋಕ ಕಲಾಲ , |
| ಗಂಡನ ಹೆಸರು | : | ಅಶೋಕ |
| ವಯಸ್ಸು | : | 26 ವರ್ಷ, |
| ಉದ್ಯೋಗ | : | ಹೋಟೆಲ್ ಮಾಲೀಕ, |
| ವಾಸಸ್ಥಳ | : | ಸ್ವಾಮಿ ವಿವೇಕಾನಂದ ನಗರ, ಹಾನಗಲ್, ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ |

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **240** ರ ಅಡಿ ಆರೋಪಿಯ ಹೇಳಿಕೆ

ಪ್ರಶ್ನೆ 1 : ನಿಮಗೆ ತಿಳಿಯುವಂತಹ ಭಾಷೆಯಲ್ಲಿ ಓದಿ ಹೇಳಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ತಿಳಿದಿದೆ

ಪ್ರಶ್ನೆ 2 : ಸದರಿ ಆರೋಪಣೆಗಳನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ನಿರಾಕರಿಸುತ್ತೀರಾ?

ಉತ್ತರಃ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು.

ಮೇಲಾಣಿಸಿದ ಹೇಳಿಕೆಯನ್ನು ದಿನಾಂಕಃ 25.07.2023 ರಂದು ನನ್ನ ಉಪಸ್ಥಿತಿಯಲ್ಲಿ ಆರೋಪಿಯಿಂದ ಪಡೆಯಲಾಗಿದ್ದು, ಸದರಿ ಹೇಳಿಕೆಯು ಆರೋಪಿಯು ಕೊಟ್ಟ ನಿಜವಾದ ಹೇಳಿಕೆಯಾಗಿದೆ.

- ಸಹಿ -
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,
ಹಾನಗಲ್.